DFA 12894569

# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 329

ಸದಸ್ಯರ ಹೆಸರು : ಶ್ರೀ ಎಂ.ನಾಗರಾಜು

ಉತ್ತರಿಸುವ ಸಚಿವರು : ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 19.08.2026

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಕಳೆದ ಮೂರು ವರ್ಷಗಳಲ್ಲಿ ರಾಜ್ಯ ರಸ್ತೆ ಸಾರಿಗೆ ನಿಗಮಗಳು (KSRTC, BMTC, NWKRTC, KKRTC) ಗಳಿಸಿದ ಆದಾಯ, ವೆಚ್ಚ ಹಾಗೂ ನಷ್ಟದ ವಿವರವೇನು; ರಾಜ್ಯದ ಸಾರಿಗೆ ನಿಗಮಗಳಲ್ಲಿ ಖಾಲಿ ಇರುವ ಚಾಲಕ, ನಿರ್ವಾಹಕ ಮತ್ತು ತಾಂತ್ರಿಕ ಸಿಬ್ಬಂದಿ ಹುದ್ದೆಗಳ ಸಂಖ್ಯೆ ಎಷ್ಟು; ನೇಮಕಾತಿ ಯಾವಾಗ ನಡೆಯಲಿದೆ; | ಕಳೆದ ಮೂರು ವರ್ಷಗಳಲ್ಲಿ ನಾಲ್ಕು ನಿಗಮಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳು ಗಳಿಸಿದ ಆದಾಯ, ವೆಚ್ಚ ಹಾಗೂ ನಷ್ಟದ ವಿವರಗಳನ್ನು **"ಅನುಬಂಧ-1"** ರಲ್ಲಿ ಹಾಗೂ ನಾಲ್ಕು ಸಾರಿಗೆ ನಿಗಮಗಳಲ್ಲಿ ಖಾಲಿ ಇರುವ ಚಾಲಕ, ನಿರ್ವಾಹಕ ಹಾಗೂ ತಾಂತ್ರಿಕ ಸಿಬ್ಬಂದಿ ಹುದ್ದೆಗಳ ವಿವರವನ್ನು **ಅನುಬಂಧ-2**ರಲ್ಲಿ ಒದಗಿಸಲಾಗಿದೆ.<br><br>ನಾಲ್ಕು ಸಾರಿಗೆ ನಿಗಮಗಳಲ್ಲಿ ಖಾಲಿ ಇರುವ ಚಾಲಕ, ನಿರ್ವಾಹಕ ಹಾಗೂ ತಾಂತ್ರಿಕ ಸಿಬ್ಬಂದಿ ಹುದ್ದೆಗಳ ನೇಮಕಾತಿ ಕುರಿತು ಕೈಗೊಳ್ಳಲಾಗುತ್ತಿರುವ ಕ್ರಮದ ವಿವರ ಈ ಕೆಳಕಂಡಂತಿದೆ<br>**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ :-**<br>ಪ್ರಸ್ತುತ ಕೊರತೆ ಇರುವ ಹಾಗೂ ಮುಂದಿನ ದಿನಗಳಲ್ಲಿ ಪ್ರಾರಂಭಿಸಲು ಉದ್ದೇಶಿಸಿರುವ ಷೆಡ್ಯೂಲ್ ಗಳಿಗೆ ಅನುಗುಣವಾಗಿ 6485 ಚಾಲನಾ (1250-ಚಾಲಕ ಮತ್ತು 5235-ಚಾಲಕ-ಕಂ-ನಿರ್ವಾಹಕ) ಹಾಗೂ 2435 ತಾಂತ್ರಿಕ ಸಿಬ್ಬಂದಿಗಳ (22-ಪಾರುಪತ್ತೇಗಾರ, 216-ಕುಶಲಕರ್ಮಿ ಹಾಗೂ 2197- ತಾಂತ್ರಿಕ ಸಹಾಯಕ) ನೇರ ನೇಮಕಾತಿಗೆ ಅನುಮತಿ ನೀಡುವಂತೆ ಕೋರಿರುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.<br>**ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ:-**<br>ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಪ್ರಸ್ತುತ ಖಾಲಿಯಿರುವ 465 ನಿರ್ವಾಹಕ ಹುದ್ದೆಗಳ ನೇರ ನೇಮಕಾತಿಗೆ ಅನುಮತಿ ನೀಡುವಂತೆ ಕೋರಿರುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.<br><br>**ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ:-**<br>ವಾ.ಕ.ರ.ಸಾ.ಸಂಸ್ಥೆಗೆ ಅಗತ್ಯವಿರುವ ವಿವಿಧ ವೃಂದದ 632 ತಾಂತ್ರಿಕ ಸಿಬ್ಬಂದಿಗಳ ನೇಮಕಾತಿ ಪ್ರಸ್ತಾವನೆ ಹಾಗೂ ದರ್ಜೆ- 2 , ದರ್ಜೆ-3 (ಮೇಲ್ವಿಚಾರಕ ಮತ್ತು ಮೇಲ್ವಿಚಾರಕೇತರ) ವೃಂದದ ಒಟ್ಟು 1230 ಹುದ್ದೆಗಳು ಮತ್ತು ಸಂಸ್ಥೆಯಲ್ಲಿ ಖಾಲಿಯಿರುವ 77 ವಿವಿಧ ದರ್ಜೆ-4ರ ಹುದ್ದೆಗಳನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಅನುಮೋದನೆ ನೀಡುವಂತೆ ಕೋರಿರುವ ಪ್ರಸ್ತಾವನೆಗಳು ಪರಿಶೀಲನೆಯಲ್ಲಿರುತ್ತವೆ.<br><br>ಮುಂದುವರೆದು, ಸಂಸ್ಥೆಯ ಜಾಹೀರಾತು ಸಂಖ್ಯೆ: 01/2019ರ ಅಧಿಸೂಚನೆಯನ್ವಯ 2814 ಹುದ್ದೆಗಳ ಪೈಕಿ ಬಾಕಿಯಿರುವ 814 ಹುದ್ದೆಗಳನ್ನು ಸದರಿ ಅಧಿಸೂಚನೆಯನ್ವಯ ಮುಂದುವರೆಸಲು ಅನುಮತಿ ನೀಡುವಂತೆ ಕೋರಿರುವ |

ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.

**ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ:-**

ಪ್ರಸ್ತುತ, ನಿಗಮದಲ್ಲಿ ಕೊರತೆ ಇರುವ ಚಾಲಕ ಹುದ್ದೆಗಳ ಸ್ಥಾನದಲ್ಲಿ ಚಾಲಕ-ಕಂ-ನಿರ್ವಾಹಕರನ್ನು ಬಳಸಿಕೊಳ್ಳಲಾಗುತ್ತಿದ್ದು, ನಿಗಮಕ್ಕೆ ಅವಶ್ಯವಿರುವ 2115 ನಿರ್ವಾಹಕ ಹುದ್ದೆಗಳು ಹಾಗೂ 7 4 5 ದರ್ಜೆ-2 , ದರ್ಜೆ- 3 ಮೇಲ್ವಿಚಾರಕ/ಮೇಲ್ವಿಚಾರಕೇತರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿಗೊಳಿಸುವಂತೆ ಕೋರಿರುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.

**ಆ** ಶಕ್ತಿ ಯೋಜನೆ ಜಾರಿಯಾದ ನಂತರ ಸಾರಿಗೆ ನಿಗಮಗಳ ಆರ್ಥಿಕ ಸ್ಥಿತಿಯಲ್ಲಿ ಉಂಟಾದ ಬದಲಾವಣೆ ಏನು; ಸರ್ಕಾರ ನೀಡಬೇಕಿರುವ ಪರಿಹಾರಧನವನ್ನು ಸಂಪೂರ್ಣವಾಗಿ ಬಿಡುಗಡೆ ಮಾಡಲಾಗಿದೆಯೇ;

ಕಳೆದ ಮೂರು ವರ್ಷಗಳಲ್ಲಿ ನಾಲ್ಕು ನಿಗಮಗಳಲ್ಲಿ ಶಕ್ತಿ ಯೋಜನೆ ಆರಂಭವಾದ ದಿನದಿಂದ ಪ್ರಯಾಣಿಕರ ಸಂಖ್ಯೆಯಲ್ಲಿ ಗಣನೀಯ ಹೆಚ್ಚಳವಾಗಿದ್ದು, ಸಾರಿಗೆ ನಿಗಮಗಳು ಗಳಿಸಿದ ಆದಾಯ, ವೆಚ್ಚ ಹಾಗೂ ನಷ್ಟದ ವಿವರಗಳನ್ನು **ಅನುಬಂಧ-1**ರಲ್ಲಿ ಒದಗಿಸಲಾಗಿದೆ.

ಶಕ್ತಿ ಯೋಜನೆಯಡಿ ಸಾರಿಗೆ ನಿಗಮಗಳಿಗೆ ಸರ್ಕಾರ ನೀಡಿರುವ ಮೊತ್ತದ ವಿವರವನು **ಅನುಬಂಧ-3**ರಲ್ಲಿ ಒದಗಿಸಲಾಗಿದೆ.

**ಇ** ಕಳೆದ ಮೂರು ವರ್ಷಗಳಲ್ಲಿ ಬಸ್ ಅಪಘಾತಗಳ ಸಂಖ್ಯೆ ಎಷ್ಟು; ಅಪಘಾತಗಳನ್ನು ಕಡಿಮೆ ಮಾಡಲು ಕೈಗೊಂಡಿರುವ ಕ್ರಮಗಳೇನು; ರಾಜ್ಯದ ಬಸ್ ನಿಲ್ದಾಣಗಳ ಆಧುನೀಕರಣ ಮತ್ತು ಪ್ರಯಾಣಿಕರ ಮೂಲಭೂತ ಸೌಲಭ್ಯಗಳ ಅಭಿವೃದ್ಧಿಗೆ ಎಷ್ಟು ಅನುದಾನ ಮೀಸಲಿಡಲಾಗಿದೆ;

ನಾಲ್ಕು ಸಾರಿಗೆ ನಿಗಮಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ನಡೆದ ಬಸ್ ಅಪಘಾತಗಳ ವಿವರ ಕೆಳಗಿನಂತಿದೆ :-

| ಕ್ರ. ಸಂ | ನಿಗಮಗಳು | 2023-24 | 2024-25 | 2025-26 |
|---|---|---|---|---|
| 1 | ಕ.ರಾ.ರ.ಸಾ.ನಿಗಮ | 847 | 890 | 837 |
| 2 | ಬೆಂ.ಮಸಾ.ಸಂಸ್ಥೆ | 209 | 170 | 159 |
| 3 | ಕ.ಕ.ರ.ಸಾ.ನಿಗಮ | 351 | 420 | 397 |
| 4 | ವಾ.ಕ.ರ.ಸಾ.ಸಂಸ್ಥೆ | 378 | 437 | 409 |
| | **ಒಟ್ಟು** | **1785** | **1917** | **1802** |

ನಾಲ್ಕು ಸಾರಿಗೆ ಸಂಸ್ಥೆಗಳಲ್ಲಿನ ಅಪಘಾತಗಳನ್ನು ಕಡಿಮೆ ಮಾಡಲು ಕೈಗೊಂಡಿರುವ ಕ್ರಮಗಳನ್ನು **ಅನುಬಂಧ-4**ರಲ್ಲಿ ಒದಗಿಸಲಾಗಿದೆ.

ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಬಸ್ ನಿಲ್ದಾಣಗಳ ಆಧುನೀಕರಣ ಮತ್ತು ಪ್ರಯಾಣಿಕರ ಮೂಲಭೂತ ಸೌಲಭ್ಯಗಳ ಅಭಿವೃದ್ಧಿಗಾಗಿ ಖರ್ಚು ಮಾಡಿದ ಮೊತ್ತದ ವಿವರ ಕೆಳಗಿನಂತಿದೆ:-

**(ರೂ.ಲಕ್ಷಗಳಲ್ಲಿ)**

| ಸಂಸ್ಥೆ/ನಿಗಮ | 2023-24 | 2024-25 | 2025-26 |
|---|---|---|---|
| ಕ.ರಾ.ರ.ಸಾ.ನಿಗಮ | 615.00 | 345.00 | - |
| ಬೆಂ.ಮ.ಸಾ.ಸಂಸ್ಥೆ | 411.00 | 1111.00 | - |
| ಕ.ಕ.ರ.ಸಾ.ನಿಗಮ | 1138.50 | 1138.50 | - |
| ವಾ.ಕ.ರ.ಸಾ.ಸಂಸ್ಥೆ | 1176.00 | 1028.00 | - |
| **ಒಟ್ಟು** | **3340.50** | **3622.50** | **-** |

**ಈ** ಕಳೆದ ಮೂರು ವರ್ಷಗಳಲ್ಲಿ ಫಿಟ್‌ನೆಸ್ ಪ್ರಮಾಣಪತ್ರವಿಲ್ಲದೆ ಸಂಚರಿಸುತ್ತಿರುವ ವಾಹನಗಳ ವಿರುದ್ಧ ಎಷ್ಟು ಪ್ರಕರಣ ದಾಖಲಿಸಲಾಗಿದೆ; ರಾಜ್ಯದಲ್ಲಿ ಹೊಸ ಚಾಲನಾ ಪರಿಕ್ಷಾ ಕೇಂದ್ರಗಳು (Driving Test Tracks) ಮತ್ತು ಆರ್‌ಟಿಓ ಕಚೇರಿಗಳ ಡಿಜಿಟಲೀಕರಣದ ಪ್ರಗತಿ ಏನು?

ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಫಿಟ್‌ನೆಸ್ ಪ್ರಮಾಣ ಪತ್ರವಿಲ್ಲದೆ ಸಂಚರಿಸುತ್ತಿರುವ ವಾಹನಗಳ ವಿರುದ್ಧ ದಾಖಲಿಸಿರುವ ಪ್ರಕರಣಗಳ ವಿವರಗಳು ಈ ಕೆಳಕಂಡಂತಿವೆ :-

| ವರ್ಷ | ದಾಖಲಿಸಿರುವ ಪ್ರಕರಣಗಳ ಸಂಖ್ಯೆ |
|---|---|
| 2023-24 | 12793 |
| 2024-25 | 12656 |
| | |

| | | |
|---|---|---|
| | | 2025ಒಟ್ಟು 38970<br>ರಾಜ್ಯದಲ್ಲಿ ಒಟ್ಟು 45 ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥಗಳನ್ನು ನಿರ್ಮಿಸಲಾಗುತ್ತಿದ್ದು ಅವುಗಳಲ್ಲಿ 09 ಕಾರ್ಯಾಚರಣೆಯಲ್ಲಿರುತ್ತದೆ.<br>ಸಾರಿಗೆ ಇಲಾಖೆಯ 09 ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿಗಳ ದಾಖಲಾತಿಗಳನ್ನು ಡಿಜಿಟಲೀಕರಣ ಮಾಡುವ ಕಾರ್ಯ ಪ್ರಗತಿಯಲ್ಲಿದ್ದು, ರಾಜ್ಯದ ಇತರೆ ಕಚೇರಿಗಳ ಡಿಜಿಟಲೀಕರಣವನ್ನು ಹಂತ ಹಂತವಾಗಿ ಕೈಗೊಳ್ಳಲಾಗುವುದು |

ಸಂಖ್ಯೆ: ಟಿಡಿ 214 ಟಿಸಿಕ್ಯೂ 2026

(ಬಿ.ಎಸ್. ಸುರೇಶ)

ಸಾರಿಗೆ ಸಚಿವರು

'ಅನುಬಂಧ-1'

**ಕಳೆದ ವರ್ಷಗಳಲ್ಲಿ ನಿಗಮಗಳ ಆದಾಯ ಹಾಗೂ ವೆಚ್ಚದ ವಿವರಗಳು ಕೆಳಕಂಡಂತಿದೆ.**

(ಮೊತ್ತ ರೂ.ಕೋಟಿಗಳಲ್ಲಿ)

| ವರ್ಷ | KSRTC | | | BMTC | | | NWKRTC | | | KKRTC | | | TOTAL | | |
|---|---|---|---|---|---|---|---|---|---|---|---|---|---|---|---|
| | ಒಟ್ಟು ಆದಾಯ | ಒಟ್ಟು ವೆಚ್ಚ | PROFIT/LOSS | ಒಟ್ಟು ಆದಾಯ | ಒಟ್ಟು ವೆಚ್ಚ | PROFIT/LOSS | ಒಟ್ಟು ಆದಾಯ | ಒಟ್ಟು ವೆಚ್ಚ | PROFIT/LOSS | ಒಟ್ಟು ಆದಾಯ | ಒಟ್ಟು ವೆಚ್ಚ | PROFIT/LOSS | ಒಟ್ಟು ಆದಾಯ | ಒಟ್ಟು ವೆಚ್ಚ | PROFIT/LOSS |
| 2023-24 | 4,544.41 | 4,839.84 | -295.43 | 2,613.80 | 3,189.25 | -575.45 | 2,372.81 | 2,695.29 | -322.48 | 2,291.85 | 2,452.97 | -161.12 | **11,822.87** | **13,177.35** | **-1,354.48** |
| 2024-25 Un-audited ) | 5,406.38 | 5,488.21 | -81.83 | 2,768.27 | 3,438.75 | -670.48 | 2,805.66 | 2,836.77 | -31.11 | 2,772.71 | 2,832.11 | -59.40 | **13,753.02** | **14,595.84** | **-842.82** |
| 2025-26 (Provisional) | 5,697.27 | 6,171.07 | -473.80 | 3,239.52 | 3,906.40 | -666.88 | 3,160.20 | 3,306.53 | -146.33 | 2,894.45 | 3,135.23 | -240.78 | **14,991.44** | **16,519.23** | **-1,527.79** |

Concerned Company statement enclosed for your information & further n/a

ಅನುಬಂಧ-2

| ಹುದ್ದೆ | ಕರಾರಸಾ ನಿಗಮ | | | ಬೆ.ಮ.ಸಾ ಸಂಸ್ಥೆ | | | ಕಕರಸಾ ನಿಗಮ | | | ವಾಕರಸಾ ಸಂಸ್ಥೆ | | |
|---|---|---|---|---|---|---|---|---|---|---|---|---|
| | ಅವಶ್ಯಕತೆ | ಕಾರ್ಯ ನಿರ್ವಹಣೆ | ಕೊರತೆ | ಅವಶ್ಯಕತೆ | ಕಾರ್ಯ ನಿರ್ವಹಣೆ | ಕೊರತೆ | ಅವಶ್ಯಕತೆ | ಕಾರ್ಯ ನಿರ್ವಹಣೆ | ಕೊರತೆ | ಅವಶ್ಯಕತೆ | ಕಾರ್ಯ ನಿರ್ವಹಣೆ | ಕೊರತೆ |
| ಚಾಲಕ | 13321 | 7454 | | 10984 | 9450 | | 6112 | 5073 | | 8692 | 4657 | |
| ಚಾ-ಕಂ-ನಿ | 8646 | 15566 | | 14377 | 13739 | 2162 | 5348 | 7237 | | 0 | 9274 | |
| ನಿರ್ವಾಹಕ | 6735 | 1754 | 3928 | | | | 3819 | 769 | 2200 | 7881 | 2258 | 384 |
| **ಒಟ್ಟು** | **28702** | **24774** | | **25361** | **23189** | | **15279** | **13079** | | **16573** | **16189** | |
| ತಾಂತ್ರಿಕ ಸಿಬ್ಬಂದಿ | 7718 | 4170 | 3548 | 3973 | 2787 | 1186 | 3643 | 2681 | 962 | 3987 | 2639 | 1348 |

ಮುಖ್ಯ ಯೋಜನಾ ಮತ್ತು ಸಂಖ್ಯಾಧಿಕಾರಿ,
ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ,
ಬೆಂಗಳೂರು.

anubandha

ಅನುಬಂಧ-3

**11.06.2023 ರಿಂದ 31.07.2026ರವರೆಗೆ ಶಕ್ತಿ ಯೋಜನೆಯಡಿ ಸರ್ಕಾರ ನೀಡಿರುವ ಮೊತ್ತದ ವಿವರ**

(ರೂ.ಕೋಟಿಯಲ್ಲಿ)

| ನಿಗಮ | 2023-24 (June-23ರ ರಿಂದ ) | | 2024-25 | |
|---|---|---|---|---|
| | ಬಿಡುಗಡೆ ಮೊತ್ತ | ಬಾಕಿ ಮೊತ್ತ | ಬಿಡುಗಡೆ ಮೊತ್ತ | ಬಾಕಿ ಮೊತ್ತ |
| ಕ.ರಾ.ರ.ಸಾ ನಿಗಮ | 1212.05 | 452.37 | 1905.20 | 495.80 |
| ಬೆ.ಮ.ಸಾ.ಸಂಸ್ಥೆ | 549.66 | 205.43 | 864.59 | 194.78 |
| ಕ.ಕ.ರ.ಸಾ ನಿಗಮ | 646.06 | 238.66 | 1013.03 | 204.32 |
| ಮ.ಕ.ರ.ಸಾ ಸಂಸ್ಥೆ | 792.23 | 283.90 | 1232.18 | 275.55 |
| ಒಟ್ಟು | **3200.00** | **1180.36** | **5015.00** | **1170.45** |

(ರೂ.ಕೋಟಿಯಲ್ಲಿ)

| ನಿಗಮ | 2025-26 | | 2026-27 (July-26ರವರೆಗೆ) | |
|---|---|---|---|---|
| | ಬಿಡುಗಡೆ ಮೊತ್ತ | ಬಾಕಿ ಮೊತ್ತ | ಬಿಡುಗಡೆ ಮೊತ್ತ | ಬಾಕಿ ಮೊತ್ತ |
| ಕ.ರಾ.ರ.ಸಾ ನಿಗಮ | 2052.01 | 891.57 | 687.09 | 343.50 |
| ಬೆ.ಮ.ಸಾ.ಸಂಸ್ಥೆ | 908.55 | 496.27 | 320.95 | 172.41 |
| ಕ.ಕ.ರ.ಸಾ ನಿಗಮ | 1046.16 | 419.25 | 343.89 | 183.71 |
| ಮ.ಕ.ರ.ಸಾ ಸಂಸ್ಥೆ | 1293.28 | 594.28 | 438.08 | 199.15 |
| ಒಟ್ಟು | **5300.00** | **2401.37** | **1790.01** | **898.77** |

(ರೂ.ಕೋಟಿಯಲ್ಲಿ)

| ಕ್ರೋಢೀಕೃತ (Jun-23 ರಿಂದ July-26ರವರೆಗೆ) | | |
|---|---|---|
| ನಿಗಮ | ಬಿಡುಗಡೆ ಮೊತ್ತ | ಬಾಕಿ ಮೊತ್ತ |
| ಕ.ರಾ.ರ.ಸಾ ನಿಗಮ | 5856.35 | 2183.24 |
| ಬೆ.ಮ.ಸಾ.ಸಂಸ್ಥೆ | 2643.75 | 1068.89 |
| ಕ.ಕ.ರ.ಸಾ ನಿಗಮ | 3049.14 | 1045.94 |
| ಮ.ಕ.ರ.ಸಾ ಸಂಸ್ಥೆ | 3755.77 | 1352.88 |
| ಒಟ್ಟು | **15305.01** | **5650.95** |

ಮುಖ್ಯ ಯೋಜನಾ ಮತ್ತು ಸಂಖ್ಯಾಧಿಕಾರಿ,
ಕ.ರಾ.ರ.ಸಾ.ನಿಗಮ, ಕೇಂದ್ರ ಕಚೇರಿ,
ಬೆಂಗಳೂರು.

**ಅನುಬಂಧ -4**

**ನಾಲ್ಕು ನಿಗಮಗಳಲ್ಲಿ ಅಪಘಾತಗಳನ್ನು ಕಡಿಮೆ ಮಾಡಲು ಕೈಗೊಂಡಿರುವ ಕ್ರಮಗಳ ವಿವರ ಈ ಕೆಳಗಿನಂತಿದೆ.**

1. ಸಂಸ್ಥೆಗೆ ಚಾಲಕರನ್ನು ನೇಮಕಾತಿ ಮಾಡುವ ಸಂದರ್ಭದಲ್ಲಿಯೇ "ಗಣಕೀಕೃತ ಚಾಲನಾ ವೃತ್ತಿ ಪರೀಕ್ಷೆ" ಮಾಡುವ ಮೂಲಕ ಅರ್ಹ ಚಾಲಕರನ್ನು ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ.
2. ಚಾಲಕರನ್ನು ನೇಮಕ ಮಾಡಿಕೊಳ್ಳುವ ಕನಿಷ್ಠ ವಯೋಮಿತಿಯನ್ನು 21 ರಿಂದ 24 ವರ್ಷಕ್ಕೆ ಏರಿಸಲಾಗಿದೆ.
3. ಉತ್ತಮ ಚಾಲನೆಯಿಲ್ಲದ ಚಾಲಕರನ್ನು ಹಾಗೂ ಅಪಘಾತ ಮಾಡಿರುವ ಚಾಲಕರನ್ನು ಗುರುತಿಸಿ ಹೆಚ್ಚಿನ ತರಬೇತಿಗಾಗಿ ಚಾಲಕರನ್ನು ತರಬೇತಿ ಕೇಂದ್ರಕ್ಕೆ ನಿಯೋಜಿಸಲಾಗುತ್ತಿದೆ.
4. ಎಲ್ಲಾ ಸಾರಿಗೆ ನಿಗಮಗಳ ಸಮೂಹದ ಸಹಭಾಗಿತ್ವದೊಂದಿಗೆ ಮದ್ಯಪಾನ ಸೇವನೆ ಅಭ್ಯಾಸವಿರುವ ಚಾಲಕರನ್ನು ಗುರುತಿಸಿ ಮದ್ಯಪಾನ ವಿಮುಕ್ತಿ ಕೇಂದ್ರದಲ್ಲಿರುವ ಕಾರ್ಯಕ್ರಮಕ್ಕೆ ಒಳಪಡಿಸಿ, ಮದ್ಯಪಾನ ಸೇವನೆ ಚಟ ತಪ್ಪಿಸಲು ಪ್ರಯತ್ನಿಸಲಾಗುತ್ತಿದೆ.
5. ಎರಡು ವರ್ಷಗಳಿಗೊಮ್ಮೆ 40 ವರ್ಷಕ್ಕಿಂತ ಹೆಚ್ಚಿನ ವಯಸ್ಸಾದ ಚಾಲಕರಿಗೆ ಕಡ್ಡಾಯವಾಗಿ ಕಣ್ಣಿನ ತಪಾಸಣೆಯನ್ನು ಮಾಡಲಾಗುತ್ತಿದೆ.
6. ತಡ ರಾತ್ರಿ ಮತ್ತು ಬೆಳಗಿನ ಜಾವದಲ್ಲಿ ಆಗಿಂದಾಗ್ಗೆ ಚಾಲಕರುಗಳು ಮದ್ಯಪಾನ ಮಾಡದೆ ಇರುವ ಬಗ್ಗೆ ಉಸಿರು ತಪಾಸಣೆಗೆ ಒಳಪಡಿಸಲಾಗುವುದು. ಇದರಿಂದಾಗಿ ಚಾಲಕರುಗಳಲ್ಲಿ ಮದ್ಯಪಾನದ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.
7. ಎಲ್ಲಾ ವಾಹನಗಳಿಗೆ ವೇಗ ಮಿತಿ ಉಪಕರಣ ಅಳವಡಿಸಲಾಗಿದೆ
8. ಹೊಸದಾಗಿ ನೇಮಕಗೊಂಡ ಚಾಲಕರನ್ನು ಅನುಸೂಚಿ ಸೇವೆಗೆ ಕಳುಹಿಸುವುದಕ್ಕಿಂತ ಮುಂಚೆ ಸುರಕ್ಷತಾ ಚಾಲನಾ ಸಂಬಂಧಿತ ಅವಶ್ಯಕ ವಿಷಯಗಳ ಬಗ್ಗೆ ತರಬೇತಿ ನೀಡಲಾಗುತ್ತಿದೆ.
9. ವಿಭಾಗದ ವ್ಯಾಪ್ತಿಗೆ ಬರುವ ಹೆಚ್ಚಿನ ಅಪಘಾತಗಳು ಘಟಿಸುವ ವಲಯಗಳನ್ನು ಗುರುತಿಸಿ, ಆ ಸ್ಥಳಗಳಲ್ಲಿ ಸೂಚನಾ ಫಲಕಗಳನ್ನು ಹಾಕಿಸುವುದಲ್ಲದೆ, ಘಟಕಗಳಲ್ಲೂ ಸಹ ಪ್ರದರ್ಶಿಸಿ ಎಲ್ಲಾ ಚಾಲಕರ ಗಮನಕ್ಕೆ ತಂದು ತಿಳುವಳಿಕೆ ನೀಡಲಾಗುತ್ತಿದೆ.
10. ವಾಹನ ಚಾಲಕರುಗಳಿಗೆ ಮುನ್ನೆಚ್ಚರಿಕೆ ಕುರಿತು ಅರಿವು ಮೂಡಿಸುವ ಸಲುವಾಗಿ ಪ್ರತಿ ವರ್ಷವೂ ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹ ಮತ್ತು ಮಾಸಾಚರಣೆಯನ್ನು ಆಚರಿಸಲಾಗುತ್ತಿದೆ. ಕಾರ್ಯಕ್ರಮದಲ್ಲಿ ಅಪಘಾತದಿಂದ ಉಂಟಾಗುವ ಸಾವು-ನೋವುಗಳ ಬಗ್ಗೆ ಅರಿವು ಮೂಡಿಸಲು ಕಾರ್ಯಾಗಾರವನ್ನು ಆಯೋಜಿಸಲಾಗುತ್ತಿದೆ.
11. ಚಾಲನಾ ಸಿಬ್ಬಂದಿಗಳಿಗೆ ಪುನಶ್ಚೇತನ ಶಿಬಿರಗಳನ್ನು ಏರ್ಪಡಿಸಿ ಸುರಕ್ಷತಾ ಕ್ರಮಗಳನ್ನು ಅನುಸರಿಸುವ ಬಗ್ಗೆ ತಿಳುವಳಿಕೆ ನೀಡಲಾಗುತ್ತಿದೆ.
12. ಅಪಘಾತಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಬಸ್ ನಿಲ್ದಾಣಗಳ ಹೊರ ಹೋಗುವ ಮತ್ತು ಒಳಬರುವ ದ್ವಾರಗಳಲ್ಲಿ ರಸ್ತೆ ಉಬ್ಬುಗಳನ್ನು ಹಾಕಿಸಲು ಕ್ರಮಕೈಗೊಳ್ಳಲಾಗುತ್ತಿದೆ.
13. ಸಂಚಾರ ನಿಯಮಗಳನ್ನು ತಪ್ಪದೇ ಪಾಲಿಸುವಂತೆ ನಿಗಮದ ತರಬೇತಿ ಕೇಂದ್ರಗಳಲ್ಲಿ ರಸ್ತೆ ಸುರಕ್ಷತೆ ಬಗ್ಗೆ ಪ್ರಾತ್ಯಕ್ಷಿಕೆಗಳನ್ನು (ವಿಡಿಯೋ ಕ್ಲಿಪ್) ತೋರಿಸಲು ವ್ಯವಸ್ಥೆ ಮಾಡಲಾಗಿದೆ.
14. ರಾತ್ರಿ ಸಾರಿಗೆಗಳಲ್ಲಿ ಕರ್ತವ್ಯ ನಿರ್ವಹಿಸುವ ಚಾಲಕರಿಗೆ ಪ್ಲಾಸ್ಕನ್ನು ನೀಡಿದ್ದು, ಕಾಫಿ/ಚಹಾ ಸೇವನೆಯಿಂದ ನಿದ್ರೆ ಮಂಪರು ತಡೆಯಲು ಕ್ರಮಕೈಗೊಳ್ಳಲಾಗಿದೆ.
15. ಅಪಘಾತ ವಲಯಗಳಲ್ಲಿ ರಾತ್ರಿ ಸಮಯದಲ್ಲಿ ಲೈನ್‌ಚೆಕ್ಕಿಂಗ್ ತಂಡಗಳಿಂದ ವಾಹನಗಳನ್ನು ಪಾರ್ಕಿಂಗ್ ಮಾಡಿಸಿ, ಅವರಿಗೆ ಅಪಘಾತಗಳ ಬಗ್ಗೆ ಹಾಗೂ ಸುರಕ್ಷಿತವಾಗಿ ಚಾಲನೆ ಮಾಡುವ ಬಗ್ಗೆ ತಿಳುವಳಿಕೆ ನೀಡಲಾಗುತ್ತಿದೆ.
16. ದೂರದ ಮಾರ್ಗಗಳ ವಾಹನಗಳಲ್ಲಿ, ಪ್ರಮುಖವಾಗಿ ಪ್ರತಿಷ್ಠಿತ ಸಾರಿಗೆಗಳಲ್ಲಿ ಸುಸ್ಥಿತಿಯಲ್ಲಿರುವ ಅಗ್ನಿ ಶಮನ ನಿರೋಧಕ ಉಪಕರಣವು (Fire Extinguisher) ಇರುವಂತೆ ಖಾತರಿಪಡಿಸಿಕೊಳ್ಳುವುದು ಹಾಗೂ ಇದನ್ನು ಉಪಯೋಗಿಸುವ ಬಗ್ಗೆ ಚಾಲನಾ ಸಿಬ್ಬಂದಿಗೆ ತಿಳುವಳಿಕೆ ನೀಡಲಾಗಿದೆ.

17. ಚಾಲನಾ ಸಮಯದಲ್ಲಿ ಮೊಬೈಲ ಬಳಕೆ, ಕರ್ತವ್ಯದ ಅವಧಿಯಲ್ಲಿ ಮದ್ಯಪಾನ/ಅಮಲಿನ ಪದಾರ್ಥ ಸೇವನೆ ಇತ್ಯಾದಿ ಸಂಚಾರ/ಸುರಕ್ಷತಾ ನಿಯಮಗಳನ್ನು ಉಲ್ಲಂಘಿಸುವ ಚಾಲಕರನ್ನು ಕೂಡಲೇ ವಿಚಾರಣಾ ಪೂರ್ವ ಅಮಾನತ್ತಿನಲ್ಲಿಟ್ಟು ಸೂಕ್ತ ಶಿಸ್ತಿನ ಕ್ರಮ ಕೈಗೊಳ್ಳಲಾಗುತ್ತಿದೆ.

18. ಅಪಘಾತ ರಹಿತ ಚಾಲಕರಿಗೆ ಬೆಳ್ಳಿ ಹಾಗೂ ಚಿನ್ನದ ಪದಕಗಳನ್ನು ನೀಡಿ ಪ್ರೋತ್ಸಾಹಿಸಲಾಗುತ್ತಿದೆ.

19. ಪ್ರತಿ ವಾಹನ ಘಟಕಕ್ಕೆ ಬಂದಾಗ Defect slip ನಲ್ಲಿ ನಮೂದಿಸಿದ ಹಾಗೂ ದೈನಂದಿನ ಪರಿಶೀಲನೆಯಲ್ಲಿ ಕಂಡುಬಂದ ದೋಷಗಳು ಮುಖ್ಯವಾಗಿ ಬ್ರೇಕ್, ಸ್ಟೇರಿಂಗ್, ಇಂಧನ ಸೋರುವಿಕೆ, ಬ್ಯಾಟರಿ ಕನೆಕ್ಷನ್, ಕೇಬಲ್ ಕನೆಕ್ಷನ್ ಮತ್ತು ಇತರೇ ದೋಷಗಳನ್ನು ಪರಿಶೀಲಿಸಿ ರಿಪೇರಿಗೆ ಕ್ರಮವಹಿಸಿ ಸುಸ್ಥಿತಿಯಲ್ಲಿಡಲಾಗುತ್ತಿದೆ.

20. ಸಂಸ್ಥೆಯ ವಾಹನಗಳಲ್ಲಿನ ಕ್ಯಾಮರಾಗಳನ್ನು ಕಡ್ಡಾಯವಾಗಿ ಸುಸ್ಥಿತಿಯಲ್ಲಿಡಲಾಗುತ್ತಿದೆ.

21. ಸಂಸ್ಥೆಯ ವಾಹನಗಳ ಎರಡೂ ಬದಿಯಲ್ಲಿನ ಸಣ್ಣ ಕನ್ನಡಿಗಳನ್ನು ಸದಾಕಾಲ ಸರಿ/ಸ್ಥಿರಗೊಳಿಸಲಾಗುತ್ತಿದೆ.

22. ಪೆಟ್ರೋಲ್, ಡೀಸಲ್, ಗ್ಯಾಸ್ ಮತ್ತು ಸೀಮೆಎಣ್ಣೆ ಮುಂತಾದ ನಿಷೇದಿತ/ಸ್ಫೋಟಕ ವಸ್ತುಗಳನ್ನು ಸಂಸ್ಥೆಯ ವಾಹನಗಳಲ್ಲಿ ತೆಗೆದುಕೊಂಡು ಹೋಗುವುದನ್ನು ನಿಷೇಧಿಸಲ್ಪಟ್ಟಿರುತ್ತದೆ. ಅದರಂತೆ, ಸಂಸ್ಥೆಯ ವಾಹನಗಳಲ್ಲಿ ನಿಷೇಧಿಸಲ್ಪಟ್ಟ ವಸ್ತುಗಳನ್ನು ತೆಗೆದುಕೊಂಡು ಹೋಗದಂತೆ ಕ್ರಮ ಕೈಗೊಳ್ಳುವುದು, ವಿಭಾಗೀಯ ತನಿಖಾಧಿಕಾರಿಗಳ ತನಿಖಾ ತಂಡದಿಂದ ಆಗಿಂದಾಗ್ಗೆ ಸಂಸ್ಥೆಯ ವಾಹನಗಳನ್ನು ತನಿಖೆಗೊಳಪಡಿಸಿ ಸ್ಫೋಟಕ ವಸ್ತುಗಳನ್ನು ತೆಗೆದುಕೊಂಡು ಹೋಗುವ ಬಗ್ಗೆ ಪರಿಶೀಲಿಸಿ ನಿರ್ಬಂಧಿಸಲಾಗುತ್ತಿದೆ.

23. ಸಂಚಾರ ಪೊಲೀಸ್ ಇಲಾಖೆಯ ಸಹಯೋಗದೊಂದಿಗೆ ಸಂಚಾರ ನಿರ್ವಹಣಾ ಕೇಂದ್ರದಲ್ಲಿ ಆಧುನಿಕ ತಂತ್ರಜ್ಞಾನದ ಮೂಲಕ ಸಂಚಾರ ನಿಯಮ ಉಲ್ಲಂಘನೆಗಳನ್ನು ಪತ್ತೆ ಹಚ್ಚುವ ಕುರಿತು ಚಾಲನಾ ಸಿಬ್ಬಂದಿಗಳಿಗೆ ತರಬೇತಿ ನೀಡಲಾಗುತ್ತಿದೆ.

24. ವಲಯಮಟ್ಟದಲ್ಲಿ ವಾರದಲ್ಲಿ ಒಂದು ದಿನ ಸುರಕ್ಷಾ ಚಾಲನೆ ಕುರಿತು ತರಬೇತಿ ನೀಡುವ ಮೂಲಕ ಚಾಲನಾ ಸಿಬ್ಬಂದಿಗಳಲ್ಲಿ ಅರಿವು ಮೂಡಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ.

25. ಪ್ರತಿ ವರ್ಷ 24ನೇ ಜನವರಿ ರಂದು "ಚಾಲಕರ ದಿನಾಚರಣೆ"ಯನ್ನು ಆಚರಿಸಿ ಸುರಕ್ಷತಾ ಚಾಲನೆ ಕುರಿತು ಚಾಲಕರಿಗೆ ಪ್ರೋತ್ಸಾಹಿಸಲಾಗುತ್ತಿದೆ.

26. ಅಪಘಾತ/ಅವಘಡಗಳನ್ನು ತಡೆಯುವ ನಿಟ್ಟಿನಲ್ಲಿ ಅಗತ್ಯ ರಸ್ತೆ ಸುರಕ್ಷತೆ ಕ್ರಮಗಳನ್ನು ಎಲ್ಲ ಪ್ರಮುಖ ಬಸ್ ನಿಲ್ದಾಣಗಳಲ್ಲಿ ಧ್ವನಿವರ್ಧಕಗಳ ಮೂಲಕ ಉದ್ಘೋಶಿಸಲಾಗುತ್ತಿದೆ.

27. ಸಂಸ್ಥೆಯ ಖಾಸಗಿ ಆಸ್ಪತ್ರೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದು, ಕಾಲಕಾಲಕ್ಕೆ ಚಾಲನಾ ಸಿಬ್ಬಂದಿಗಳ ಆರೋಗ್ಯ ತಪಾಸಣೆಗೆ ಅವಕಾಶ ಕಲ್ಪಿಸಲಾಗಿದೆ.

28. ಚಾಲಕರುಗಳಿಗೆ ವಿಶೇಷವಾಗಿ ಅಪಘಾತ ಪ್ರವೃತ್ತಿಯುಳ್ಳ ಚಾಲಕರಿಗೆ ಕಾಲ ಕಾಲಕ್ಕೆ ನಿಗಮದ ಪ್ರಾದೇಶಿಕ ತರಬೇತಿ ಕೇಂದ್ರಗಳಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

ಮುಖ್ಯ ಯೋಜನಾ ಮತ್ತು ಸಂಖ್ಯಾಧಿಕಾರಿ
ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ,
ಬೆಂಗಳೂರು.